ದಿನಾಂಕ 1ನೇ ಸೆಪ್ಟೆಂಬರ್ 1995ರಂದು ಪ್ರಶ್ನೋತ್ತರ ವೇಳೆ ನಡೆಯದ ಕಾರಣ ಸದನದಲ್ಲಿ ಉತ್ತರಿಸುವ 13ನೇ ಪಟ್ಟಿಯಲ್ಲಿರುವ 15 ಪ್ರಶ್ನೆಗಳ ಪೈಕಿ 5 ಪ್ರಶ್ನೆಗಳ ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 58 ಪ್ರಶ್ನೆಗಳ ಪೈಕಿ 43 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದ ಮುಂದಿಡುತ್ತೇನೆ.

ದಿನಾಂಕ 4ನೇ ಸೆಪ್ಟೆಂಬರ್ 1995ರಂದು ಪ್ರಶ್ನೋತ್ತರ ವೇಳೆ ನಡೆಯದ ಕಾರಣ.

ಸದನದಲ್ಲಿ ಉತ್ತರಿಸುವ 14ನೇ ಪಟ್ಟಿಯಲ್ಲಿರುವ 15 ಪ್ರಶ್ನೆಗಳ ಪೈಕಿ 14 ಪ್ರಶ್ನೆಗಳ ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 94 ಪ್ರಶ್ನೆಗಳ ಪೈಕಿ 74 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದ ಮುಂದಿಡುತ್ತೇನೆ.

ವಿಷಯ: ಸುಳ್ಯದಲ್ಲಿ ಪರಿಶಿಷ್ಟ ಜಾತಿ ವಿವಿಧೋದ್ದೇಶ ಸಹಕಾರಿ ಸಂಘ ಮಂಜೂರಾತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 944 (1778)

ಶ್ರೀ ಅಂಗಾರ (ಸುಳ್ಯ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಯದಲ್ಲಿ ಪರಿಶಿಷ್ಟ ಜಾತಿ ವಿವಿಧೋದ್ದೇಶ ಸಹಕಾರಿ ಸಂಘ ಮಂಜೂರಾಗಿದೆಯೇ ಮಂಜೂರಾಗಿದ್ದಲ್ಲಿ ಯಾವ ವರ್ಷದಲ್ಲಿ ಮತ್ತು ಎಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಆ) ಜಿಲ್ಲಾ ಪರಿಷತ್ ಮತ್ತು ಸರ್ಕಾರದ ಕಡೆಯಿಂದ ಈ ಸಹಕಾರಿ ಸಂಘಕ್ಕೆ ಎಷ್ಟು ಹಣ ಬಿಡುಗಡೆಯಾಗಿದೆ ಮತ್ತು ಯಾವ ವರ್ಷದಲ್ಲಿ.

ಇ) ಈ ಸಹಕಾರಿ ಸಂಘದ ವ್ಯವಹಾರ ನಡೆಸುವವರು ಯಾರು ಮತ್ತು ಎಷ್ಟು ಜನ ನೊಂದಾವಣಿಯಾಗಿರುತ್ತದೆ.

ಈ) ಈ ಸಂಘದ ಉಳಿತಾಯ ಖಾತೆ ಮತ್ತು ಕರೆಂಟ್ ಖಾತೆ ಯಾರ ಹೆಸರಿನಲ್ಲಿದೆ?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು):-

ಅ) ಹೌದು, ಸದರಿ ಸಂಘವು ದಿನಾಂಕ:8-6-90ರಲ್ಲಿ ನೊಂದಣಿಯಾಗಿರುತ್ತದೆ. ಸುಳ್ಯದಲ್ಲಿರುವ ಕುದಂಜಿ ವೆಂಕಟರಮಣಗೌಡರ ಕಾಲೇಜು ಎದುರುಗಡೆಯಲ್ಲಿರುವ ಕಟ್ಟಡದಲ್ಲಿ ಕೆಲಸ ನಿರ್ವಹಿಸುತ್ತಿದೆ.

ಆ) ಈ ಸಂಘಕ್ಕೆ ಜಿಲ್ಲಾ ಪರಿಷತ್‌ನಿಂದ ಸಿಬ್ಬಂದಿ ಸಹಾಯಧನ ಮೊತ್ತ ರೂ. 5,000-00 ದಿನಾಂಕ: 16-8-93ರಂದು ಬಿಡುಗಡೆ ಆಗಿರುತ್ತದೆ. ಸರ್ಕಾರದ ಕಡೆಯಿಂದ ಹಣ ಬಿಡುಗಡೆಯಾಗಿರುವುದಿಲ್ಲ.

ಇ) ಸಂಘದ ವ್ಯವಹಾರವನ್ನು ಅದರ ಆಡಳಿತ ಮಂಡಳಿಯವರು ನಡೆಸುತ್ತಿದ್ದಾರೆ. ಈ ಸಹಕಾರ ಸಂಘದಲ್ಲಿ (ದಿನಾಂಕ:21-7-95ಕ್ಕೆ) ಒಟ್ಟು 335 ಸದಸ್ಯರಿದ್ದಾರೆ.

ಈ) ಸಂಘ ತನ್ನ ಉಳಿತಾಯ ಖಾತೆಯನ್ನು ದಿನಾಂಕ: 26-8-90ರಂದು ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಬ್ಯಾಂಕ್ ಸುಳ್ಯ ಶಾಖೆಯಲ್ಲಿ ಸಂಘದ ಹೆಸರಿನಲ್ಲಿ ತೆರೆದಿದೆ. ಮತ್ತು ಕರೆಂಟ್ ಖಾತೆ ತೆರೆದಿರುವುದಿಲ್ಲ.

ವಿಷಯ: ತುಂಗಾಭದ್ರ ಸಕ್ಕರೆ ಕಾರ್ಖಾನೆಯಲ್ಲಿ ಕಾರ್ಮಿಕರ ಮುಷ್ಕರ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 946 (1616)

ಶ್ರೀ ಆಯನೂರು ಮಂಜುನಾಥ (ಹೊಸನಗರ): ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗದ ತುಂಗಭದ್ರಾ ಸಕ್ಕರೆ ಕಾರ್ಖಾನೆಯಲ್ಲಿ ಎರಡು ತಿಂಗಳಿಂದ ಕಾರ್ಮಿಕರು ಮುಷ್ಕರ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಯಾವ ಬೇಡಿಕೆಗಳನ್ನು ಕುರಿತು ಮುಷ್ಕರ ನಡೆಯುತ್ತಿದೆ? ವಿವರ ಒದಗಿಸುವುದು.

ಇ) ತುಂಗಭದ್ರಾ ಸಕ್ಕರೆ ಕಾರ್ಖಾನೆಯಲ್ಲಿ ಕಾರ್ಮಿಕ ಕಾಯ್ದೆಗಳ ಉಲ್ಲಂಘನೆಯಾಗಿದೆಯೆ? ಯಾವ ಕಾಯ್ದೆಗಳ ಉಲ್ಲಂಘನೆಯಾಗಿದೆ? ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ; ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕೂಡಲೇ ಕ್ರಮ ಕೈಗೊಳ್ಳಲಾಗುವುದೇ?

ಈ) ಕಾರ್ಖಾನೆ ಪುನಃ ಪ್ರಾರಂಭಿಸಲು ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೇ?

ಶ್ರೀ ಸಿ.ಗುರುನಾಥ್ (ಕಾರ್ಮಿಕ ಸಚಿವರು):-

ಅ) ಹೌದು.

ಆ) ಈ ಕೆಳಕಂಡ ಬೇಡಿಕೆಗಳನ್ನು ಒತ್ತಾಯಿಸಿ ಮುಷ್ಕರ ಹೂಡಿದ್ದರು.

1) 32 ಉಪಧನ ಪ್ರಕರಣಗಳನ್ನು ಇತ್ಯರ್ಥಗೊಳಿಸಿ ಪಾವತಿ ಮಾಡುವುದು;

2) ಹಾಳಾಗಿರುವ ಉಪಕರಣಗಳನ್ನು ದುರಸ್ಥಿಗೊಳಿಸಿ ಸೆಪ್ಟೆಂಬರ್ ಮಧ್ಯಭಾಗದಲ್ಲಿ ಕಬ್ಬು ಅರೆಯುವ ವ್ಯವಸ್ಥೆ ಮಾಡುವುದು;

3) ಕಾರ್ಮಿಕರ ಸಂಬಳವನ್ನು ಪ್ರತಿ ತಿಂಗಳು 10ನೇ ತಾರೀಖಿನೊಳಗಾಗಿ ಪಾವತಿಸುವುದು;

4) ಬಾಕಿ ಇರುವ ಬೋನಸ್ ಫೈನಲ್, ರಜಾ ಸಂಬಳ ತ್ರಿಪಕ್ಷೀಯ ಒಪ್ಪಂದದ ಪ್ರಕಾರ ಸಿಗಬೇಕಾದ 9 ತಿಂಗಳ ಹೆಚ್ಚುವರಿ ಮೇತನ ಬಾಕಿ, ಸಮವಸ್ತ್ರ, ಶೂಸ್ ಭತ್ಯೆ ಇವುಗಳನ್ನು ಪಾವತಿಸುವುದು.

5) ಬಾಕಿ ಉಳಿದಿರುವ ಎಮ್ಮಾ ವಂತಿಗೆಯನ್ನು ಕಟ್ಟುವುದು;

6) ಮೇ 95ರ ಬಾಕಿ ಸಂಬಳ ಮತ್ತು ಜೂನ್ 95ರ ಪೂರ್ತಿ ಸಂಬಳ ಕೂಡಲೇ ಪಾವತಿ ಮಾಡುವುದು:

7) ಶೈಕ್ಷಣಿಕ ಮುಂಗಡ, ಭವಿಷ್ಯ ನಿಧಿಯ ಕಾರ್ಮಿಕರ ಮತ್ತು ಆಡಳಿತ ಮಂಡಳಿಯ ವಂತಿಗೆ ಪಾವತಿ ಮಾಡುವುದು.

ಇ) ಉಪಧನ ಪಾವತಿ ಕಾಯ್ದೆ ಮತ್ತು ಕಾರ್ಖಾನೆ ಕಾಯ್ದೆಗಳ ಕೆಲವು ಅಂಶಗಳು ಉಲ್ಲಂಘನೆಯಾಗಿರುತ್ತವೆ. ಈ ಬಗ್ಗೆ ಶಿವಮೊಗ್ಗದ ಕಾರ್ಮಿಕ ಆಯುಕ್ತರವರ ಮಧ್ಯೆ ಸಂಧಾನ ಸಭೆಗಳನ್ನು ನಡೆಸಿ ದಿನಾಂಕ 8-8-95ರಂದು ಎರಡೂ ಪಕ್ಷಗಳ ನಡುವೆ ಒಪ್ಪಂದವಾಗಿದೆ. ಆದುದರಿಂದ ಸದ್ಯಕ್ಕೆ ಮುಂದಿನ ಕ್ರಮದ ಅಗತ್ಯವಿಲ್ಲ.

ಈ) ಆಡಳಿತವರ್ಗ ಮತ್ತು ಕಾರ್ಮಿಕರ ನಡುವೆ ದಿನಾಂಕ 8-8-95ರಂದು ಒಪ್ಪಂದವಾಗಿ, ಕಾರ್ಯನೆಯು ದಿನಾಂಕ 9-8-95ರಿಂದ ಕಾರ್ಯಾರಂಭ ಮಾಡಿರುವುದರಿಂದ ಮುಂದಿನ ಕ್ರಮ ಕೈಗೊಳ್ಳುವುದು ಉದ್ಭವಿಸುವುದಿಲ್ಲ.

ವಿಷಯ: ಕೃಷಿ ಇಲಾಖೆಯಲ್ಲಿ ನೀಡುವ ಬಹುಮಾನದ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 949 (1509)

ಶ್ರೀ ಅರಗಂ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ